




# ಸೋದರಿ ನಿವೇದಿತಾ ಭಾಗ ೪

**ಕಥೆ:** ದೇವಪ್ರಸಾದ ಭಟ್ಟಾಚಾರ್ಯ **ಅನುವಾದ:** ಉಷಾ ಎಸ್. ಮೂರ್ತಿ **ಚಿತ್ರ:** ಸುನಿತಾ ವಾಸು




ಭಾರತೀಯರು ಬಡತನ ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದರು. ಭಾರತಕ್ಕೆ ಮತ್ತೆ ಮೇಲೇಳುವ ಶಕ್ತಿಯಿದೆ ಎಂದು ಸ್ವಾಮೀಜಿ ನಂಬಿದ್ದರು.
ಸ್ವಾಮೀಜಿಯವರ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಅವರ ಪಾಶ್ಚಾತ್ಯ ಶಿಷ್ಯರು ಭಾರತಕ್ಕೆ ಬಂದಿದ್ದರು. ಆದರೆ ಇದು ಸಾಧ್ಯವಾಗಬೇಕಾದರೆ ಮೊದಲು ಅವರು ಭಾರತ ದೇಶವನ್ನು ಪ್ರೀತಿಸಲು ಕಲಿಯಬೇಕಾಗಿತ್ತು.
ಈ ಬಗ್ಗೆ ನಿವೇದಿತಾಳಿಗೆ ತರಬೇತಿ ನೀಡಲು ಸ್ವಾಮೀಜಿ ಆರಂಭಿಸಿದರು.
ಅವಳ ಸೇವಾಮನೋಭಾವನೆ ಹಾಗೂ ತ್ಯಾಗ, ಸ್ವಾಮೀಜಿಯವರ ಯೋಜನೆಗೆ ಅವಳನ್ನು ಸಮರ್ಪಕ ವ್ಯಕ್ತಿಯನ್ನಾಗಿ ಮಾಡಿತ್ತು.
ಸ್ವಾಮೀಜಿ ಹಾಗೂ ಅವರ ಇತರ ವಿದೇಶೀ ಶಿಷ್ಯರೊಡನೆ ನಿವೇದಿತಾ ಹಿಮಾಲಯದ ಅಲ್ಮೋರಾಕ್ಕೆ ಪ್ರವಾಸ ಹೊರಟಳು.
ಸ್ವಾಮೀಜಿ ಅಲ್ಲಿ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಅವರ ಅಭಿಪ್ರಾಯಗಳನ್ನು ನಿವೇದಿತಾ ಸುಲಭವಾಗಿ ಒಪ್ಪಿಕೊಳ್ಳುತ್ತಿರಲಿಲ್ಲ.
ಅದಕ್ಕೆ ಅವರು ಅವಳನ್ನು ತುಂಬಾ ಬಯ್ದರು.


ತಮ್ಮ ಅಭಿಪ್ರಾಯಗಳನ್ನು ಕುರಿತು ಬೇರೆಯವ
ರೊಂದಿಗೆ ರಾಜಿ ಮಾಡಿಕೊಳ್ಳುವ ವ್ಯಕ್ತಿ ಅವರಾಗಿರ
ಲಿಲ್ಲ. ಮೃದುವಾಗಿ ತಿಳಿಯಹೇಳುವ ವಿಧಾನವನ್ನು
ಅವರು ಅನುಸರಿಸುತ್ತಿರಲಿಲ್ಲ.
ಹೇಳಿದ್ದೆಲ್ಲವನ್ನೂ ವಿಧೇಯತೆ
ಯಿಂದ ಒಪ್ಪಿಕೊಳ್ಳುವ ಗುಣ
ನಿವೇದಿತಾಳಲ್ಲಿ ಇರಲಿಲ್ಲ.
ಹಾಗಾಗಿ ಅವರಿಬ್ಬರ ನಡುವೆ
ಭಿನ್ನಾಭಿಪ್ರಾಯ
ಉಂಟಾಗುತ್ತಿತ್ತು.
ಅವರ ಬೈಗುಳವನ್ನು ಸಹಿಸುವುದು ನಿವೇದಿತಾಳಿಗೆ ಕಷ್ಟವಾಗಬಹುದೆಂದು
ಶಿಷ್ಯೆಯೊಬ್ಬಳು ಸ್ವಾಮೀಜಿಗೆ ತಿಳಿಸಿದಳು. ಅದನ್ನು ಕೇಳಿದ ಸ್ವಾಮೀಜಿ ಸ್ವಲ್ಪ ಹೊತ್ತು
ಗಂಭೀರವಾಗಿ ಯೋಚಿಸಿದರು. ನಂತರ ಬಂದು ನಿವೇದಿತಾಳನ್ನು ಆಶೀರ್ವದಿಸಿದರು.
ಸ್ವಾಮೀಜಿಯ ಶಿಷ್ಯರಾದ ಸ್ವಾಮಿ ಸ್ವರೂಪಾನಂದರು ಬಂಗಾಳಿ ಭಾಷೆ
ಹಾಗೂ ಹಿಂದೂ ಶಾಸ್ತ್ರಗಳನ್ನು ಕುರಿತು ಅವಳಿಗೆ ಪಾಠಮಾಡಿದರು.
ಸ್ವಾಮೀಜಿಯ ವಿಚಾರಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾದಾಗ
ಅವಳು ಅವುಗಳನ್ನು ಕುರಿತು ಸ್ವರೂಪಾನಂದರೊಂದಿಗೆ ಚರ್ಚಿಸುತ್ತಿದ್ದಳು.
ಆಗ ಅವಳಿಗೆ ಅರ್ಥವಾಗುವಂತೆ ಅವರು ವಿವರಿಸುತ್ತಿದ್ದರು.
ಅವರು ಅವಳಿಗೆ ಗೀತೆಯನ್ನು ಕುರಿತು ಪಾಠ ಮಾಡಿದರು. ಧ್ಯಾನ ಮಾಡುವುದನ್ನೂ
ಕಲಿಸಿಕೊಟ್ಟರು. ಧ್ಯಾನದ ಆಚರಣೆಯಿಂದ ಅವಳಿಗೆ ತುಂಬಾ ಸಹಾಯವಾಯಿತು.
ಸ್ವಾಮೀಜಿ ಏನನ್ನು ಹೇಳಬಯಸುತ್ತಿದ್ದಾರೆಂಬುದು ಅವಳಿಗೆ ಮನದಟ್ಟಾಯಿತು.


ಆಮೇಲೆ ಒಂದು ದಿನ ಸ್ವಾಮೀಜಿ ನಿವೇದಿತಾಳ ಕೆಲಸದ ಬಗ್ಗೆ ಮತ್ತು ತಾವು ಅವಳಲ್ಲಿಟ್ಟಿರುವ ವಿಶ್ವಾಸದ ಬಗ್ಗೆ ವಿವರಿಸಿದರು.
ನಿವೇದಿತಾ ತಾನು ಪ್ರಾರಂಭಿಸಲು ಉದ್ದೇಶಿಸಿರುವ ಶಾಲೆಯನ್ನು ಕುರಿತು ಅವರ ಸಲಹೆ ಕೇಳಿದಳು.
ಅವಳಿಗೆ ಕಾರ್ಯ ನಿರ್ವಹಿಸಲು ಪೂರ್ಣ ಸ್ವಾತಂತ್ರ್ಯ ನೀಡಿದ ಸ್ವಾಮೀಜಿ ಅವಳನ್ನು ಆಶೀರ್ವದಿಸಿದರು.
ನೀನು ನನ್ನೊಡನೆ ಅಮರನಾಥ ಯಾತ್ರೆಗೆ ಬಾ. ಅಲ್ಲಿ ನಿನ್ನನ್ನು ಶಿವನಿಗೆ ಅರ್ಪಿಸಿಬಿಡಬೇಕೆಂದಿದ್ದೇನೆ.
ನನಗೆ ಎರಡು ಪಟ್ಟು ಆಶೀರ್ವಾದ ಸಿಕ್ಕಿದಂತಾಯಿತು.
ತುಂಬಾ ದುರ್ಗಮವಾದ ಹಿಮದಿಂದ ಆವೃತವಾದ ದಾರಿಯಲ್ಲಿ ಮೈಲಿಗಟ್ಟಲೆ ನಡೆಯುತ್ತಾ ಅವರು ಅಮರನಾಥ ಗುಹೆಯನ್ನು ತಲುಪಿದರು.
ಮುಂದಿನ ಸಂಚಿಕೆಗೆ..